## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **356 (402)**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ** : **10.07.2023**

**ಉತ್ತರಿಸಬೇಕಾದ ಸಚಿವರು** : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪ್ರಸ್ತುತ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಘಟಕಗಳೆಷ್ಟು: | ರಾಜ್ಯದಲ್ಲಿ ಒಟ್ಟು 171 ಡಯಾಲಿಸಿಸ್ ಘಟಕಗಳು ಸ್ಥಾಪಿತಗೊಂಡಿದ್ದು, 169 ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಘಟಕಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ ನೋಡಿಕೊಳ್ಳುವ ಸಂಸ್ಥೆಗಳಾವುವು | ESKAG ಸಂಜೀವಿನಿ ಸಂಸ್ಥೆಯು ಸರ್ಕಾರಿ ಆಸ್ಪತ್ರೆಗಳಲ್ಲಿ ಪಿ.ಪಿ.ಪಿ.ಮಾದರಿಯಲ್ಲಿ ಡಯಾಲಿಸಿಸ್ ಘಟಕಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. |
| ಇ) | ಮೇಲ್ವಿಚಾರಣೆ ಮತ್ತು ಉಸ್ತುವಾರಿ ನೋಡಿಕೊಳ್ಳುವ ಸಂಸ್ಥೆಗಳು ಡಯಾಲಿಸಿಸ್ ಘಟಕಗಳನ್ನು ಸರಿಯಾಗಿ ಉಸ್ತುವಾರಿ ನೋಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br><br>ಯಾವುದೇ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆಯಲ್ಲಿ ತೊಂದರೆಯಾದಲ್ಲಿ ಸಂಸ್ಥೆಯವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ. ನಿಯಮ ಉಲ್ಲಂಘನೆಯ ಸಂದರ್ಭದಲ್ಲಿ ESKAG ಸಂಸ್ಥೆಯವರ ವಿರುದ್ಧ ದಂಡವನ್ನು ವಿಧಿಸಲಾಗಿದೆ. |
| ಈ) | ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಈಗಾಗಲೇ ಕ್ಲಿನಿಕಲ್ audit ಮಾಡಲಾಗಿದ್ದು, ಕ್ಲಿನಿಕಲ್ audit ವರದಿಯಲ್ಲಿ ಸಮರ್ಪಕ ನಿರ್ವಹಣೆ ಮಾಡದ ಸಂಸ್ಥೆಗಳಿಗೆ ಶೇಕಡಾ 10% ರಷ್ಟು ದಂಡವನ್ನು ವಿದಿಸಲು ಆದೇಶಿಸಲಾಗಿದೆ.<br><br>ಇದರನ್ವಯ ದಿನಾಂಕ:13.07.2020 ರಿಂದ ESKAG ಮತ್ತು BRS ಸಂಸ್ಥೆ ಯವರಿಗೆ ಪ್ರತಿ ಮಾಹೆ ಪಾವತಿಸುವ ಬಿಲ್ಲಿನ ಮೊತ್ತದಲ್ಲಿ ಶೇಕಡಾ 10% ರಷ್ಟು ದಂಡ ವಿಧಿಸಲಾಗಿದೆ. ಈವರೆಗೆ ರೂ.7,86,00,000/- ದಂಡವನ್ನು ಸಂಗ್ರಹಿಸಲಾಗಿದೆ.<br><br>ಜಿಲ್ಲಾ ಆಸ್ಪತ್ರೆಗಳಲ್ಲಿ ನೆಫ್ರಾಲಜಿಸ್ಟ್ ಮತ್ತು ಸಾಮಾನ್ಯ ವೈದ್ಯರು ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ಸಾಮಾನ್ಯ ವೈದ್ಯರುಗಳು ಸದರಿ ಸಂಸ್ಥೆಯಿಂದಲೇ ನೇಮಿಸಬೇಕಾಗಿರುತ್ತದೆ. ಆದರೆ ಸದರಿ ಸಂಸ್ಥೆಯವರು ತಾಲ್ಲೂಕು ಆಸ್ಪತ್ರೆಯಲ್ಲಿ ಸಾಮಾನ್ಯ ವೈದ್ಯರುಗಳನ್ನು ನೇಮಿಸದಿರುವುದರಿಂದ ಪ್ರತಿ ಸೈಕಲ್‌ಗೆ ರೂ.364/-ಗಳು ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಸಾಮಾನ್ಯ ವೈದ್ಯರು ಮತ್ತು ನೆಫ್ರಾಲಜಿಸ್ಟ್‌ಗಳನ್ನು ನೇಮಿಸದಿರುವುದರಿಂದ ಪ್ರತಿ ಸೈಕಲ್‌ಗೆ ರೂ.72/- ಗಳ ದಂಡವನ್ನು ಸಂಗ್ರಹಿಸಲಾಗಿದೆ.<br><br>ಇದುವರೆವಿಗೂ ESKAG ಸಂಸ್ಥೆಯವರಿಂದ ರೂ:6,06,29,316/- ಮತ್ತು BRS ಸಂಸ್ಥೆಯವರಿಂದ ರೂ: 17,98,25,780/- ಗಳ ದಂಡವನ್ನು ಸಂಗ್ರಹಿಸಲಾಗಿದೆ. |

**ಸಂಖ್ಯೆ: ಆಕುಕ 47 ಎಸ್.ಟಿ.ಕ್ಯೂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು